

# ಹಿಮಾವೃತ..!



■ ಚಿತ್ರ ಬರಹ:
**ಸುರೇಖಾ ಭಟ್, ಬೆಂಗಳೂರು**

ಡಿಸೆಂಬರ್ ಕೊನೇ ವಾರ ಬೆಳಿಗ್ಗೆ ಶ್ರೀನಗರದಿಂದ ಸೋನ್‌ಮಾರ್ಗ್ ಕಡೆ ಹೊರಟಾಗ ಕಾಶ್ಮೀರವಿನ್ನೂ ಬೆಳ್ಳನೆ ಮಂಜಿನಲ್ಲಿ ಮುಸುಕು ಹೊದ್ದು ಮಲಗಿತ್ತು. ಚಳಿ–ಚಳಿ, ಮೋಡ ಕವಿದ ವಾತಾವರಣ, ಟ್ಯಾಕ್ಸಿಯಲ್ಲಿ ಹೀಟರ್ ಇದ್ದ ಕಾರಣ 'ಹೊರಜಗತ್ತೂ ಹೀಗೆ ಬೆಚ್ಚಗಿದೆ' ಎಂಬ ಭಾವ! ಸ್ವಲ್ಪ ಮುಂದೆ ಹೋದಂತೆಯೇ ಶುರುವಾದ ಪಿರಿಪಿರಿ ಮಳೆ– ನಮ್ಮೂರಿನ ಸೋನೆ ಮಳೆಯನ್ನು ನೆನಪಿಸಿತ್ತು. ಬರುತ್ತಾ ಬರುತ್ತಾ ಸಣ್ಣ ಮಳೆ ಹನಿಗಳು ಹದವಾದ ಹಿಮಪಾತದ ಹನಿಗಳಾದವು. ಸೋನ್‌ಮಾರ್ಗ್ ಇನ್ನೂ 9 ಕಿ.ಮೀ. ದೂರ ಇದ್ದಾಗಲೇ ನಮ್ಮ ಟ್ಯಾಕ್ಸಿ ಪ್ರಯಾಣ ಕೊನೆಗೊಂಡಿತು.

ಎಂಟೆದೆ ಇದ್ದವರು ಬಾಡಿಗೆಗೆ ಸಿಗುವ ಬೂಟು, ಕೋಟು ತೊಟ್ಟು, ಕುದುರೆಯೇರಿ, ಸೋನ್‌ಮಾರ್ಗದ ಕಡೆ ಏರುದಾರಿಯಲ್ಲಿ ಮುಂದುವರಿಯಬಹುದು. ಅಲ್ಲಿಯೇ ಹಿಮದಲ್ಲಿ ಆಡುವವರು ಆಡಬಹುದು. ಕುದುರೆಯೇರಿ ಹೊರಟೆವೆಂದರೆ– ಆಹಾ! ಎಂಥ ಹಬ್ಬ ಕಣ್ಣಿಗೆ! ಆ ಕುದುರೆಗಳಂತೂ ಒಂದನ್ನೊಂದು ಮೈ ಒರೆಸಿಕೊಳ್ಳುತ್ತಾ ತಮ್ಮದೇ ಲಹರಿಯಲ್ಲಿ, ಹಿಮಬಿದ್ದ ರಸ್ತೆಯಲ್ಲಿ ಬೆಟ್ಟ ಹತ್ತಿದವು.

ಹಿಮಪಾತ ಮತ್ತಷ್ಟು ತೀವ್ರವಾಯಿತು. ಮರದ ಮೇಲೆ ಬಿದ್ದ ಹಿಮ, ಎಲೆಗಳ ಮೇಲೆ ಶೇಖರವಾಗಿ ಹಸಿರು ಮರವನ್ನು ಬಿಳಿ ಮರವನ್ನಾಗಿ ಪರಿವರ್ತಿಸುತ್ತಿದ್ದವು. ಡಿಸೆಂಬರ್ ಚಳಿಯಲ್ಲಿ ಬೆಳ್ಳಂಬೆಳ್ಳನೆಯ ಕಾಶ್ಮೀರ..! ಆಹಾ.. ಈ ಸೌಂದರ್ಯವನ್ನು ಎಷ್ಟು ಬರೆದರೂ ಹೋಗಿ ಬರದ ಹೊರತು ಅರ್ಥವಾಗುವುದಿಲ್ಲ!

ಕಾಶ್ಮೀರದ ಬಹುತೇಕ ಮರಗಳು ಎಲೆ ಉದುರಿಸಿಕೊಂಡು ಬೋಳಾಗಿದ್ದರೆ, ಇಲ್ಲಿನ ಮರಗಳು ಮಾತ್ರ ಹಸಿರಾಗಿದ್ದವು. ಸೋನ್‌ಮಾರ್ಗ್‌ಗೆ 5 ಕಿ.ಮೀ. ಇರುವಾಗಲೇ ನಮ್ಮ ಕುದುರೆ ಸವಾರಿಯೂ ಅಂತ್ಯಗೊಂಡಿತು. ತೃಪ್ತಿಯಾಗುವಷ್ಟು ಹಿಮಪಾತ ಕಾಣ ಸಿಕ್ಕಿತು. ಅಷ್ಟರಲ್ಲೇ ನಮ್ಮ ಟ್ಯಾಕ್ಸಿ ಡ್ರೈವರ್‌ನಿಂದ ಮತ್ತೆ ಫೋನ್ ಕರೆ: 'ಬೇಗ ಬನ್ನಿ, ರಸ್ತೆಗೆಲ್ಲ ಹಿಮಬಿದ್ದ ಮೇಲೆ ಹಿಂದಿರುಗುವುದು ಕಷ್ಟ!'

ಕುದುರೆಯೇರಿ ಹಿಂತಿರುಗಿ ಕೆಳಕ್ಕೆ ಹೊರಟರೆ, ರಸ್ತೆ ಮೇಲೆ ಬಿದ್ದ ಹಿಮದಿಂದಾಗಿ ಕುದುರೆಗಳ ಕಾಲುಗಳು ಜಾರುತ್ತಿವೆ. ಅವುಗಳ ಮೇಲೆ ಕುಳಿತ ನಮಗೆ ಭಯ. ಅವು ರಸ್ತೆಯ ಪಕ್ಕದ ಕಡಿದಾದ ಭಾಗಕ್ಕೆ ಹೋದರೆ ನಮಗೆ ಇನ್ನೂ ಭಯ. ಅಡ್ಡ ಅಡ್ಡ ಹೆಜ್ಜೆಗಳನ್ನಿಡುತ್ತ ಬೆಟ್ಟದಿಂದ ಕೆಳಗಿಳಿಯುವ ಕುದುರೆಗಳ ಜಾಣ್ಮೆ ಮೆಚ್ಚಬೇಕಾದ್ದದ್ದು. ನಮಗಿಂತ ಅವುಗಳಿಗೆ ಹೆಚ್ಚು ಜಾಗ್ರತೆ ಇರುತ್ತದೆ. ಅವಕ್ಕೂ ಪ್ರಾಣಭಯ ಇರುವುದಿಲ್ಲವೇ?

ಮರಗಟ್ಟುತ್ತಿರುವ ಹಸ್ತಗಳನ್ನು ಉಜ್ಜಿಕೊಳ್ಳುತ್ತ, ಹಿಮಪಾತವನ್ನು ಅಸ್ವಾದಿಸುತ್ತ, ನಮ್ಮ ಟ್ಯಾಕ್ಸಿ ಇದ್ದೆಡೆಗೆ ಬಂದರೆ... ಅದು 'ಹಿಮದ ಕಾರ್' ಆಗಿಬಿಟ್ಟಿದೆ! ಅಕ್ಕಪಕ್ಕದ ಅಂಗಡಿ ಮುಂಗಟ್ಟುಗಳ ಮೇಲೆಲ್ಲ ಹಿಮ–ಹಿಮ. ಕೋಟು, ಬೂಟು ಹಿಂದಕ್ಕೆ ಕೊಟ್ಟು, ಟ್ಯಾಕ್ಸಿ ಒಳಗೆ ಕುಳಿತ ಮೇಲಷ್ಟೇ ಅಬ್ಬ.. ಬದುಕಿದೆವು ಎಂಬ ಭಾವ! ಹಿಂತಿರುಗಿ ಬರುವಾಗ ಕಾಣ ಸಿಕ್ಕ ಹಿಮಾವೃತ ಬೋಳುಮರಗಳ ಸೌಂದರ್ಯ ವರ್ಣಿಸಲು ನನ್ನ ಬಳಿ ಶಬ್ದಗಳಿಲ್ಲ, ಕ್ಷಮಿಸಿ! ಸದ್ಯಕ್ಕೆ ಫೋಟೋಗಳನ್ನು ನೋಡಿ ಕಣ್ತುಂಬಿಸಿಕೊಳ್ಳಿ!